**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಕೊಪ್ಪ.</u>**

***<u>ಸಿ.ಸಿ. ನಂ.351/2021</u>***

***<u>ಪಿರ್ಯಾಧಿದಾರರುಃ</u>*** ಕೆ.ವಿ.ಎಸ್.ಎಸ್.ಎನ್., ಎಸ್.ವಿ.ಟಿ. ರಸ್ತೆ, ಕೊಪ್ಪ ಅಂಚೆ ಮತ್ತು ತಾಲ್ಲೂಕು ಇದರ ಪರವಾಗಿ ಸಿ.ಇ.ಒ.ಃ ಕೆ.ಪಿ. ಚನ್ನಪ್ಪ, ಬಿನ್ ಪುಟ್ಟಪ್ಪ ಗೌಡ, ವಯಸ್ಸು ಸುಮಾರು 70 ವರ್ಷ, ವಾಸ ಇಂದಿರಾನಗರ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**ವಿರುದ್ಧ**

***<u>ಆರೋಪಿಃ</u>*** ರಾಘವೇಂದ್ರ ಬಿನ್ ಸಂಜೀವ ಶೆಟ್ಟಿ, ವಾಸ ಚೌಕಿ, ಕೆಸವೆ ಅಂಚೆ, ಕೊಪ್ಪ ತಾಲ್ಲೂಕು.

- -

**<u>ಆಪಾದನೆ</u>**

ಆರೋಪಿಯಾದ ನೀವು ನಿಮ್ಮ ಅವಶ್ಯಕತೆಗಾಗಿ ಪಿರ್ಯಾಧಿದಾರರ ಸೊಸೈಟಿಯಿಂದ ಸಾಲವನ್ನು ಪಡೆದುಕೊಂಡಿದ್ದು, ಸದರಿ ಸಾಲದ ಬಾಬ್ತು ರೂ.1,55,000/- ತೀರುವಳಿ ಮಾಡುವ ಸಲುವಾಗಿ 417924 ರ ಸಂಖ್ಯೆಯುಳ್ಳ 06.03.2021 ದಿನಾಂಕವನ್ನು ನಮೂದಿಸಿದ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಕೊಪ್ಪ ಶಾಖೆಯ ಒಂದು ಚೆಕ್ಕುನ್ನು ಅವರಿಗೆ ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾಧಿದಾರರು C.D.C.C. ಬ್ಯಾಂಕ್, ಕೊಪ್ಪ ಶಾಖೆಗೆ ಹಾಜರುಪಸಿದಾಗ "Funds insufficient'' ಎಂಬ ಹಿಂಬರಹದೊಂದಿಗೆ ನೀವು ಕೊಟ್ಟಂತ ಚೆಕ್ ವಾಪಸ್ಸಾಗಿದ್ದು ಸದರಿ ಚೆಕ್ ಅಮಾನ್ಯಗೊಂಡ ಬಗ್ಗೆ ನಿಮ್ಮ ಗಮನಕ್ಕೆ ದಿನಾಂಕ 06.04.2021 ರಂತೆ ವಕೀಲರ ನೋಟೀಸು ನೀಡಿದ್ದು ಸದರಿ ನೋಟೀಸು ನಿಮಗೆ ದಿನಾಂಕ 12.04.2021 ರಂದು ಜಾರಿಯಾಗಿದಾಗ್ಯೂ ಸಹ ನೀವು ಸದರಿ ಚೆಕ್ ಬಾಬ್ತು ಹಣವನ್ನು ನೀಡದೇ ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಎಸಗಿರುತ್ತೀರಿ.

ಪ್ರಶ್ನೆ 1ಃ- ನಿಮಗೆ ಓದಿ ಹೇಳಿದ ಆರೋಪಣೆ ಅರ್ಥವಾಯಿತೇ?

ಉತ್ತರಃ ತಿಳಿಯಿತು

ಪ್ರಶ್ನೆ 2ಃ- ಮೇಲಿನ ಆಪಾಧನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ ವಿಚಾರಣೆಯಾಗಬೇಕು.

ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಸ್ವತಃ ನಾನೇ ಬರೆದುಕೊಂಡಿರುವುದು ನಿಜವೆಂದು ದೃಡೀಕರಿಸುತ್ತೇನೆ.

ದಿನಾಂಕ 11.07.2025.

ಸಹಿ/- 11.07.2025.
(ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.